ANUBHAVS



# ನನ್ನ ಪಾಲನಹಾರಿ

© Copyright 2010, Manasamarthyadata.com

manasamarthyadata.com



-ವಿದಾ.ದರ ರಾಣೆ

ನನ್ನ ವ್ಯವಸಾಯ ನೈಜೀರಿಯದಲ್ಲಿರುವುದರಿಂದ ನಾನು ಈಗ ಅಲ್ಲೇ ವಾಸವಾಗಿದ್ದೇನೆ. ಇಲ್ಲಿ ಕಳ್ಳರ ಹಾವಳಿ ತುಂಬಾ ಜಾಸ್ತಿ, ಕಳ್ಳತನ, ದರೋಡೆ ನಡೆಯುತ್ತಲೇ ಇರುತ್ತವೆ. ಆದರೆ, ನಮ್ಮ ಕ್ವಾಂಪ್ಲೆಕ್ಸದಲ್ಲಿ ಈ ತರದ ಘಟನೆಗಳು ಎಂದೂ ಆಗಲಿಲ್ಲ. ನಮ್ಮ ಕ್ವಾಂಪ್ಲೆಕ್ಸಗೆ ಎರಡು ವಿಂಗ್ಸ್‌ಗಳಿವೆ.

6 ಜೂನ್ 2007ರಂದು ನಾನು ನನ್ನ ಗೆಳೆಯ ಸಂಜಯ್ ಹಾಗೂ ಅವನ ಇನ್ನೊಬ್ಬ ಗೆಳೆಯ ಆಫೀಸ್‌ನಿಂದ ಮನೆಗೆ ಹೊರಟೆವು. ಆದರೆ ಅವರಿಬ್ಬರಿಗೂ ತಮ್ಮ ಬೇರೊಬ್ಬ ಗೆಳೆಯನಿಗೆ ಭೇಟಿಯಾಗಲು ಹೋಗಲಿಕ್ಕಿತ್ತು. ಆದುದರಿಂದ ಅವರು ಬೇರೆ ಕಾರಿನಿಂದ ಹೋದರು. ನಾನು ಬೇರೆ ಕಾರಿನಿಂದ ಮನೆಗೆ ಬಂದೆ. ನಾನು ಮನೆ ಮುಟ್ಟಿದ ಬಳಿಕ ಉಪಾಸನೆ ಮಾಡಿ, ಊಟ ಮಾಡಿದೆನು. ನಾನು ಎಲ್ಲಾ ಕೆಲಸ ಮುಗಿಸುತ್ತಲೇ ಇದ್ದೆನು. ಅಷ್ಟರಲ್ಲಿ ನನ್ನ ಗೆಳೆಯನ ಫೋನ್ ಬಂದಿತು. ನಮ್ಮ ಬಿಲ್ಡಿಂಗ್‌ನಲ್ಲಿ ಏನೋ ತೊಂದರೆ ಇದೆ, ಅವನ ಬಾಲ್ಕೋನಿ ಕೆಳಗೆ ಒಬ್ಬ ಬಂದೂಕುಧಾರಿ ಆಫ್ರೀಕನ್ ವ್ಯಕ್ತಿಯನ್ನು ಕಂಡನು. ಅದರ ಬಳಿಕ ಫೋನ್‌ನಲ್ಲಿ ಕೆಲವು ಸಲ ನಾವು ಸಂಪರ್ಕ ಮಾಡಿದ್ದೆವು. ನಂತರ ರೂಮ್‌ನಲ್ಲಿ ಲಾಯಿಟ್ ಆಫ್ ಮಾಡಿ ಕುಳಿತು ಕೊಂಡೆವು. ನೈಜೀರಿಯಾದಲ್ಲಿ ಕಳ್ಳರು ಇಡೀ ಕ್ವಾಂಪ್ಲೆಕ್ಸ ಲೂಟಿ ಮಾಡುತ್ತಾರೆಂದು ಕೇವಲ ಕೇಳಿದ್ದೆವು. ಹಾಗೆನಾದರೂ ಆಗುತ್ತಿದೆಯಾ ಎಂದು ಹೆದರಿ ಇಡೀ ರಾತ್ರಿ ಕಳೆದೆನು. ಬೆಳಿಗ್ಗೆ 5 ಘಂಟೆಗೆ ನಾನು ಎದ್ದು ಹೊರಗಡೆ ನೋಡಿದೆ ಎಲ್ಲಾ ಶಾಂತವಾಗಿತ್ತು, ನಾನು ಆಫೀಸಿಗೆ ಹೋಗಲು ತಯಾರಾದೆನು. ಕೆಳಗಿಳಿದಾಗ ಸಂಜಯ್ ಹಾಗೂ ಅವನ ಗೆಳೆಯ ಪೊಲೀಸರೊಂದಿಗೆ ಮಾತಾಡುತ್ತಿದ್ದರು. ಸಂಜಯನೊಡನೆ ಮಾತಾಡಿದಾಗ, ಏನೋ ಗಂಭೀರ ಸಮಸ್ಯೆವಿಲ್ಲ ಎಂದು ತಿಳಿಯಿತು. ನಾನು ಆಫೀಸಿಗೆ ಹೊರಟೆನು. ಆಫೀಸ್ ಮುಟ್ಟಿದ ನಂತರ ನಮ್ಮ ಕ್ವಾಂಪ್ಲೆಕ್ಸನಲ್ಲಿ ಇರುವ ಒಬ್ಬ ಭಾರತೀಯ ಮಿತ್ರನೊಡನೆ ಮಾತಾಡುವಾಗ ರಾತ್ರಿ ನಡೆದಿರುವ ಎಲ್ಲಾ ಘಟನೆಗಳು ವಿಸ್ತಾರವಾಗಿ ತಿಳಿಯಿತು. ಆಗ ಸದ್ಗುರು ಮಾವುಲಿ ಅನಿರುದ್ಧ ಬಾಪೂರವರಿಗೆ ಮನಃ ಪೂರ್ವಕ ಅಭಾರ ಅರ್ಪಿಸಿದೆನು.





ರಾತ್ರಿ ನಡೆದ ಘಟನೆ ಈ ಪ್ರಕಾರವಿದೆ.---

ಸಂಜಯ್ ಹಾಗೂ ಅವನ ಗೆಳೆಯ ಮನೆಗೆ ಹಿಂತಿರುಗುವಾಗ ಈ ಕಳ್ಳರು ಅವರ ಹಿಂದಿನಿಂದ ಬಂದು ಬಿಲ್ಡಿಂಗ್ ಒಳಗೆ ನುಗ್ಗಿದರು. ನಂತರ ಅವರ ಎರಡೂ ಮೊಬೈಲ್, ಲ್ಯಾಪ್‌ಟಾಪ್, ಪಾಸ್‌ಪೋರ್ಟ್ ಮತ್ತು ವಾಚ್ ಹಾಗೂ ಹಣ ದೋಚಿದರು. ನಂತರ ಇತರ ಭಾರತೀಯರು ಇಲ್ಲಿರುತ್ತಾರೆಯೇ? ಎಂದು ವಿಚಾರಿಸಿದರು. ಸಂಜಯ್ ಅವರ ಬಂದೂಕಿನಿಂದ ತುಂಬಾ ಹೆದರಿದ್ದನು. ಅವರನ್ನು ನನ್ನ ಮನೆಕಡೆಗೆ ಕೊಂಡೊಯ್ಯುತ್ತಿದ್ದನು. ಆಗ ಒಬ್ಬ ಆಫ್ರಿಕನ್ ಅವರಿಗೆ ನನ್ನ ಮನೆಯಿಂದ ವಿರುದ್ಧ ದಿಕ್ಕಿನಲ್ಲಿ ಹೋಗಲು ಹೇಳಿದನು. ಈ ಸಂಕೇತವೇ ನನ್ನ ಉಳಿಸಿತು.

ಅದರ ನಂತರ ಅವರು ನನಗೆ ಈ ಘಟನೆ ಹೇಳಿದ ಮೇಲೆ ಮನೆಗೆ ಹೋದರು. ಅವನನ್ನು ಪೂರ್ಣ ಲೂಟಿ ಮಾಡಿದ ನಂತರ ಈ ಮೂವರನ್ನು (ಸಂಜಯ, ಅವನ ಗೆಳೆಯ ಹಾಗೂ ಈ ಘಟನೆ ಹೇಳಿದವ) ಅವನ ಮನೆ ಲಾಕ್ ಮಾಡಿ ಓಡಿದರು. ಈ ಮೂವರು ಎಮರ್‌ಜೆನ್ಸಿ ಎಕ್ಸಿಟ್‌ನಿಂದ ಹೊರಗೆ ಬಂದು ಸೆಕ್ಯೂರಿಟಿ ಹಾಗೂ ಪೊಲೀಸರಿಗೆ ವಿಷಯ ಮುಟ್ಟಿಸಿದರು.

ಇದನ್ನು ಕೇಳಿ ನನ್ನ ತಲೆ ತಿರುಗಲಾರಂಭಿಸಿತು. ಈ ಎಲ್ಲಾ ಪ್ರಸಂಗದಿಂದ ನನ್ನನ್ನು ಸದ್ಗುರು ಬಾಪೂರವರೇ ಪಾರು ಮಾಡಿದರು ಬಾಪೂರವರ ಚರಣಕ್ಕೆ ನನ್ನ ಶತ ಶತ ಪ್ರಣಾಮಗಳು.

ANUBHAVS

# HARI OM

© Copyright 2010, Manasamarthyadata.com

manasamarthyadata.com